## ವಿದ್ಯುತ್ ಯೋಜನೆಗಾಗಿ ಮರ ಹನನ

# ರೈತಸಂಘ ಕಾರ್ಯಕರ್ತರಿಂದ ಪ್ರತಿಭಟನೆ

Hosa Digant 28/02/14

ಹುಣಸೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೈಗಾ-ಕೋಮಿಕೋಡ್ ವಿದ್ಯುತ್ ಹೈಟೆನ್ಷನ್ ಯೋಜನೆ ಅನುಷ್ಠಾನಕ್ಕಾಗಿ ಲಕ್ಷಾಂತರ ಮೌಲ್ಯದ ಮರ ಕಡಿಯಲು ಆದೇಶಿರುವುದನ್ನು ಖಂಡಿಸಿ ರೈತ ಸಂಘ , ಹಸಿರು ಸೇನೆ ಕಾರ್ಯಕರ್ತರು ಪಟ್ಟಣದ ಹೊಸ ಬಸ್ ನಿಲ್ದಾಣದ ಬಳಿ ಮನವ ಸರಪಳಿ ನಿರ್ಮಿಸಿ ಪ್ರತಿಭಟಿಸಿದರು.

ಮೈಸೂರು ಜಿಲ್ಲೆ, ಜಾಮರಜನಗರ, ಮಂಡ್ಯ ಜಿಲ್ಲೆಯಿಂದ ಕೊಡಗಿನತ್ತ ಬೈಕ್‌ನಲ್ಲಿ ತೆರಳುತ್ತಿದ್ದ ನೂರಾರು ಮಂದಿ ಕಾರ್ಯಕರ್ತರು ಮಾರ್ಗ ಮಧ್ಯ ಪಟ್ಟಣದ ಹೊಸ ಬಸ್ ನಿಲ್ದಾಣದ ಬಳಿ ಮನವ ಸರಪಳಿ ನಿರ್ಮಿಸಿ ಯೋಜನೆ ಕೈ ಬಿಡಬೇಕೆಂದು ಒತ್ತಾಯಿಸಿಮ ರಸ್ತೆ ತಡೆ ಕೂಡ ನಡೆಸಿದರು.

ಬಡಗಲಪುರ ನಾಗೇಂದ್ರ ಅವರು ಮಾತನಾಡಿ, ಅಭಿವೃದ್ಧಿ ಹೆಸರಿನಲ್ಲಿ ರಾಜ್ಯದ ಅಗಾಧ ವನ್ಯ ಸಂಪತ್ತನ್ನು ನಾಶ ಮಾಡಲು ರಾಜ್ಯ ಹಾಗೂ ಕೇಂದ್ರ ಸರಕಾರ ಮುಂದಾಗಿವೆ. ಕಾಡನ್ನು ಬೆಳಸಿ ನಾಡುನ್ನು ಉಳಿಸಿ ಎಂಬುವ ಸರಕಾರ ಐದು ಸಾವಿರ ಮರ ಕಡಿದು ಉರುಳಿಸಲು ಆದೇಶಿಸಿರುವುದು ಎಷ್ಟು ಸರಿ? ಇದಕ್ಕೆ ಟಿಂಬರ್ ಲಾಭಿ ಕೂಡ ಕಾರಣವಾಗಿದೆ ಎಂದು ಆರೋಪಿಸಿದರು.

ವಿದ್ಯುತ್ ಮಾರ್ಗದ ಬದಲು ಮೈಸೂರು-ಕೋಮಿಕೋಡ್ ಮಧ್ಯೆ ಚಾಲ್ತಿಯಲ್ಲಿರುವ 220 ಕೆ.ವಿ. ಲೈನನನ್ನು ಮೇಲ್ದರ್ಜೆಗೆರಿಸಬಹುದು ಇಲ್ಲವೆ, 400 ಕೆ.ವಿ. ಹೈಟೆನ್ಷನ್ ಮಾರ್ಗವನ್ನು ಮೈಸೂರು-ಕೊಡಗಿನ ಗಡಿಯಲ್ಲಿರುವ ಡಿಲೈನ್ ಮುಖಾಂತರ ಕೊಂಡೊಯ್ಯಬಹುದು ಇಲ್ಲವೇ ಗುಜರಾತ್‌ನಲ್ಲಿ ನಿರ್ಮಿಸಿರುವಂತೆ ಸುರಂಗ ಮಾರ್ಗವನ್ನು ಆಯ್ದುಕೊಳ್ಳಬಹುದಾಗಿದೆ ಎಂದರು.

ಪ್ರತಿಭಟನೆಯಲ್ಲಿ ರೈತ ಸಂಘದ ರಾಜ್ಯ ಸಂಚಾಲಕರಾದ ಕೆ.ಎಸ್.ಬಸವರಾಜು, ಕೆ.ಎಸ್. ನಂಜುಡೇಗೌಡ, ನರಸರಾಜು, ಡೀಡ್ ಸಂಸ್ಥೆಯ ಶ್ರೀ ಕಾಂತ್, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಭಾಗವಹಿಸಿದ್ದರು.

Vijayavani 28/2/14

# ಅಕಾಲಿಕ ಮಳೆಗೆ ಮತ್ತೆರಡು ಬಲಿ

**ಬೆಂಗಳೂರು:** ರಾಜ್ಯದ ವಿವಿಧೆಡೆ ಗುರುವಾರವೂ ಗುಡುಗು ಸಹಿತ ಮಳೆ ಸುರಿದಿದ್ದು, ಸಿಡಿಲಿನ ಬಡಿತಕ್ಕೆ ಇಬ್ಬರು ಮೃತಪಟ್ಟು, ಬಾಲಕಿಯೊಬ್ಬಳು ಗಾಯಗೊಂಡಿದ್ದಾಳೆ. ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕು ಯಾದವಾಡದ ರಾಮಣ್ಣ ಲಕ್ಕಪ್ಪ ಚಿಪ್ಪಲಕಟ್ಟಿ(55), ಧಾರವಾಡ ತಾಲೂಕಿನ ಅಮ್ಮಿನಬಾವಿಯ ಸಿರಾಜ್ ಹುಸೇನ್‌ಸಾಬ್ ನದಾಫ್(21) ಮೃತ ಪಟ್ಟಿದ್ದು, ಮಾರಡಗಿ ಗ್ರಾಮದ ಬಾಲಕಿ ಗಾಯಗೊಂಡಿದ್ದಾಳೆ. ವಿಜಾಪುರ ಜಿಲ್ಲೆ ಸಿಂದಗಿ ಪಟ್ಟಣದಲ್ಲಿ ಗುಡುಗು ಮಿಶ್ರಿತ ಭಾರೀ ಬಿರುಗಾಳಿಯೊಂದಿಗೆ ಮಳೆ ಸುರಿಯಿತು.ರೇಷ್ಮೆ ಇಲಾಖೆ ಮತ್ತಿತರ ಕಡೆ ವಿದ್ಯುತ್ ಕಂಬಗಳು ಧರೆಗೆ ಉರುಳಿದ್ದು, ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಯಿತು. ಚಿತ್ರದುರ್ಗ ತಾಲೂಕಿನ ಸುತ್ತಮುತ್ತ ಸತತ ಅರ್ಧ ಗಂಟೆ ಕಾಲ ಮಳೆ ಸುರಿದಿದ್ದು, ಜಿಲ್ಲೆಯ ಇತರೆಡೆ ಮೋಡ ಕವಿದ ವಾತಾವರಣ ಕಂಡು ಬಂತು.



ಬಾಗಲಕೋಟೆಯಲ್ಲಿ ಗುರುವಾರ ಮಳೆ ಸುರಿಯುತ್ತಿರುವುದು.

ಪ್ರಜಾವಾಣಿ 28/02/14

# ವಿದ್ಯುತ್ ಕಳ್ಳತನ ತಡೆಗೆ ಮಾಹಿತಿ ಆಹ್ವಾನ

ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿಯು ವಿದ್ಯುತ್ ಕಳ್ಳತನ ತಡೆಯಲು ಸಾರ್ವಜನಿಕರಿಂದ ಮಾಹಿತಿ ಆಹ್ವಾನಿಸಿದೆ. ಮಾಹಿತಿದಾರರಿಗೆ ಸೂಕ್ತ ಬಹುಮಾನ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಬೆಸ್ಕಾಂ ಜಾಗೃತದಳ, ಕ್ರೆಸೆಂಟ್ ಟವರ್ಸ್, ಮಾಧವನಗರ. ಸಂಪರ್ಕಕ್ಕೆ: 2238 1838.

ಇ-ಮೇಲ್: spvigilance@yahoo.in